# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2428 |
| ಉತ್ತರಿಸಬೇಕಾದ ದಿನಾಂಕ | 22.03.2022 |
| ಉತ್ತರಿಸಬೇಕಾದ ಸಚಿವರು | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಧುಗಿರಿ ಪುರಸಭೆಯ ವ್ಯಾಪ್ತಿಯಲ್ಲಿ ಯು.ಜಿ.ಡಿ ಕಾಮಗಾರಿಗೆ ಬಿಡುಗಡೆಯಾದ ಅನುದಾನ ಎಷ್ಟು; | ಮಧುಗಿರಿ ಪುರಸಭೆಯ ಒಳಚರಂಡಿ ಯೋಜನೆಯ ರೂ.48.95 ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ:31-05-2017ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br>ಕಾಮಗಾರಿಗೆ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ. |

| ಕ್ರ. ಸಂ | | ಆರ್ಥಿಕ ಮಾದರಿ (ರೂ.ಕೋಟಿ ಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಕೋಟಿ ಗಳಲ್ಲಿ) |
|---|---|---|---|
| 1 | ಸರ್ಕಾರದ ವಂತಿಕೆ (75%) | 36.71 | 23.30 |
| 2 | ಆರ್ಥಿಕ ಸಂಸ್ಥೆಗಳಿಂದ ಸಾಲ (20%) | 9.79 | -ಇಲ್ಲ- |
| 3 | ಸ್ಥಳೀಯ ಸಂಸ್ಥೆ ವಂತಿಕೆ (5%) | 2.45 | 0.2 |
| | **ಒಟ್ಟು** | **48.95** | **23.5** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಯಾವಾಗ ಪ್ರಾರಂಭವಾಯಿತು ಮತ್ತು ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಆಡಳಿತಾತ್ಮಕ ಅನುಮೋದನೆ ಆದ ಒಂದು ವರ್ಷದ ನಂತರ ವೆಟ್‌ವೆಲ್ ಗೆ ಜಾಗವನ್ನು ದಿನಾಂಕ 04-06-2018 ರಲ್ಲಿ ಜಿಲ್ಲಾಧಿಕಾರಿಗಳು ಕಾಯ್ದಿರಿಸಿದ ಮೇಲೆ ಮಧುಗಿರಿ ಒಳಚರಂಡಿ ಕಾಮಗಾರಿಯ ರೂ.34.01 ಕೋಟಿಗಳ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ:18-07-2018 ರಂದು ಟೆಂಡರ್ ಅಧಿಸೂಚನೆ ಹೊರಡಿಸುವ ಮೂಲಕ ಪ್ರಾರಂಭಿಸಲಾಗಿರುತ್ತದೆ.<br>ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್‌ದಾರರ ವಿವರ ಈ ಕೆಳಗಿನಂತಿವೆ.<br>1. ಮೆ\|\|ಪಿ.ಸಿ.ಸ್ನೇಹಲ್ ಕನ್ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಗುಜರಾತ್.<br>2. ಮೆ\|\|ಮೈಕಾನ್ ಕನ್ಸ್ಟ್ರಕ್ಷನ್ಸ್ ಲಿಮಿಟೆಡ್, ಬೆಂಗಳೂರು.<br>3. ಮೆ\|\|ಗಿಡ್ಡೆಗೌಡ ಕಾಂಟ್ರಾಕ್ಟರ್ಸ್, ಬೆಂಗಳೂರು.<br>4. ಮೆ\|\|ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್.<br>ಇವರುಗಳಲ್ಲಿ ಮೆ\|\|ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ರವರ ತಗಾದೆಯನ್ನು ಇತ್ಯರ್ಥಗೊಳಿಸಿ, ಮೆ\|\|ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ಮತ್ತು ಮೆ\|\|ಗಿಡ್ಡೆಗೌಡ ಕಾಂಟ್ರಾಕ್ಟರ್ಸ್, ಬೆಂಗಳೂರು ಇವರನ್ನು |

<table>
<tr><td></td><td></td><td>ತಾಂತ್ರಿಕವಾಗಿ ಅರ್ಹತೆಗೊಳಿಸಿ, ಅತೀ ಕಡಿಮೆ ದರ ನಮೂದಿಸಿರುವ ಮೆ||ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ರವರಿಗೆ ಗುತ್ತಿಗೆ ಕರಾರನ್ನು ದಿನಾಂಕ 10-07-2019 ರ ಪ್ರಕಾರ ರೂ.35.76 ಕೋಟಿಗಳಿಗೆ ಕಾಮಗಾರಿಯನ್ನು 24 ತಿಂಗಳಲ್ಲಿ ಪೂರ್ಣಗೊಳಿಸಲು ವಹಿಸಲಾಗಿದೆ.</td></tr>
<tr><td>ಇ)</td><td>ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ; ಬಳಕೆಯಾದ ಮೊತ್ತ ಎಷ್ಟು:</td><td>ಮಧುಗಿರಿ ಪಟ್ಟಣದ ಒಳಚರಂಡಿ ಯೋಜನೆಯ ಪ್ರಸ್ತುತ ಕಾಮಗಾರಿ ಪ್ರಗತಿ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ವಿವರ</th><th>ಗುತ್ತಿಗೆ ಕರಾರಿನಂತೆ</th><th>ಪ್ರಗತಿ</th></tr>
<tr><td>1</td><td>ಆಂತರಿಕ ಕೊಳವೆಮಾರ್ಗ</td><td>65.81 ಕಿ.ಮೀ.</td><td>51.30 ಕಿ.ಮೀ.</td></tr>
<tr><td>2</td><td>ಮೆಷಿನ್ ಹೋಲ್</td><td>2290</td><td>1858</td></tr>
<tr><td>3</td><td>ಗೃಹಸಂಪರ್ಕ</td><td>5700</td><td>3050</td></tr>
<tr><td>4(a)</td><td>4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ MBBR ತಾಂತ್ರಿಕತೆಯ ಮಲಿನ ನೀರು ಸಂಸ್ಕರಣಾ ಘಟಕ.</td><td colspan="2">4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ ಮಲಿನ ನೀರು ಸಂಸ್ಕರಣಾ ಘಟಕಗಳ ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಯಂತ್ರೋಪಕರಣಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದೆ.</td></tr>
<tr><td>4(b)</td><td>80 ಕೆ.ಎಲ್.ಡಿ. ಮಲಿನ ನೀರು ಸಂಸ್ಕರಣಾ ಘಟಕ</td><td colspan="2">ಹಸ್ತಾಂತರಿಸಿರುವ ಜಮೀನಿನಲ್ಲಿ ಮಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಬಾರದೆಂದು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.</td></tr>
<tr><td>5</td><td>ವೆಟ್ ವೆಲ್ - 2 ಸಂಖ್ಯೆ</td><td colspan="2">ಸಾರ್ವಜನಿಕರು ವೆಟ್‌ವೆಲ್-1ರ ನಿರ್ಮಾಣಕ್ಕೆ ವಿರೋಧ ವ್ಯಕ್ತ ಪಡಿಸಿರುವ ಕಾರಣ ಕಾಮಗಾರಿಯನ್ನು ಪ್ರಾರಂಭಿಸಿ ರುವುದಿಲ್ಲ. ವೆಟ್‌ವೆಲ್-2ಕ್ಕೆ ಜಾಗವನ್ನು ಪುರಸಭೆಯವರು ಹಸ್ತಾಂತರಿ ಸಿರುವುದಿಲ್ಲ.</td></tr>
</table>
ಯೋಜನೆಗೆ ಫೆಬ್ರುವರಿ-2022ರ ಅಂತ್ಯಕ್ಕೆ ರೂ.17.00 ಕೋಟಿಗಳು ವೆಚ್ಚವಾಗಿರುತ್ತವೆ.</td></tr>
</table>

| | | |
|---|---|---|
| ಈ) | ಕಾಮಗಾರಿಯು ವಿಳಂಬವಾಗಲು ಕಾರಣವೇನು; | ಕಾಮಗಾರಿ ವಿಳಂಬಕ್ಕೆ ಕಾರಣಗಳು:-<br>1. ಸರ್ಕಾರಿ ಗೋಮಾಳ ಜಮೀನಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವೆಟ್‌ವೆಲ್-1ರ ಕಾಮಗಾರಿ ಪ್ರಾರಂಭಿಸಿದ ಸಂದರ್ಭದಲ್ಲಿ, ಸ್ಥಳೀಯ ನಿವಾಸಿಯು ಜೂನ್-2021ರಲ್ಲಿ ಜಮೀನು ತಮ್ಮದೆಂದು ಹೇಳಿ ಮಧುಗಿರಿ ನ್ಯಾಯಾಲಯದಲ್ಲಿ ಕೇಸು ದಾಖಲಿಸಿರುತ್ತಾರೆ. ಆದ್ದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.<br>2. 2ನೇ ವೆಟ್‌ವೆಲ್ ಘಟಕವನ್ನು ನಿರ್ಮಿಸಲು ಪುರಸಭೆ, ಮಧುಗಿರಿ ಯವರು ಇದುವರೆವಿಗೂ ಸದರಿ ಜಾಗವನ್ನು ಮಂಡಳಿಗೆ ಹಸ್ತಾಂತರಿಸಿರುವುದಿಲ್ಲ.<br>3. ವಲಯ-1 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ 80 ಕೆ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕವನ್ನು ಹಸ್ತಾಂತರಿಸಿರುವ ಜಮೀನಿನಲ್ಲಿ ನಿರ್ಮಿಸಬಾರದೆಂದು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.<br>4. ವೆಟ್‌ವೆಲ್-1ಅನ್ನು ನಿರ್ಮಿಸಲು ಅಡಚಣೆ ಇರುವುದರಿಂದ ಹಾಗೂ ವೆಟ್‌ವೆಲ್-2ಕ್ಕೆ ಜಾಗವನ್ನು ಹಸ್ತಾಂತರಿಸದೇ ಇರುವುದರಿಂದ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಚಾಲನೆಗೊಳಿಸುವ ಉದ್ದೇಶದಿಂದ ಪರ್ಯಾಯವಾಗಿ, ಸರ್ಕಾರಿ ಜಮೀನಿನ ಸರ್ವೆ ನಂ.58 ರ, ಆಗಸರಹೊಳೆ ಹಳ್ಳದ ಹತ್ತಿರ ವೆಟ್‌ವೆಲ್ ಘಟಕವನ್ನು ನಿರ್ಮಿಸಲು ಜಾಗವನ್ನು ಗುರುತಿಸಲಾಗಿದೆ. ಸದರಿ ಜಾಗದಲ್ಲಿ ವೆಟ್‌ವೆಲ್ ಘಟಕವನ್ನು ನಿರ್ಮಿಸುವುದರಿಂದ ಉದ್ದೇಶಿಸಿರುವ ಎರಡನೇ ವೆಟ್‌ವೆಲ್ ಘಟಕವನ್ನು ಕೈಬಿಡಲಾಗಿದೆ.<br>5. ಸದರಿ ಪರ್ಯಾಯ ಜಮೀನನ್ನು ಹಸ್ತಾಂತರಿಸಲು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಜಿಲ್ಲಾಧಿಕಾರಿಗಳು, ತಹಶೀಲ್ದಾರ್ ಮತ್ತು ಭೂದಾಖಲೆ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ. ಸದರಿ ಜಮೀನಿನ ಪಕ್ಕದಲ್ಲಿ 66 ಕೆವಿ ವಿದ್ಯುತ್ ವಾಹಕ ಹಾದು ಹೋಗಿರುವುದರಿಂದ ಸದರಿ ಜಮೀನನ್ನು ಹಸ್ತಾಂತರಿಸಲು ಕೆ.ಪಿ.ಟಿ.ಸಿ.ಎಲ್ ರವರಿಂದ ನಿರಾಕ್ಷೇಪಣಾ ಪತ್ರ ಸಲ್ಲಿಸುವಂತೆ ಭೂದಾಖಲೆ ಅಧಿಕಾರಿಗಳು ಸೂಚಿಸಿರುತ್ತಾರೆ. ಅದರಂತೆ, ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳು ಸ್ಥಳ ಪರಿಶೀಲಿಸಲಾಗಿದ್ದು, ವರದಿಯನ್ನು ಪಡೆದು ಮಂಡಳಿಗೆ ಸಲ್ಲಿಸಲು ಸೂಚಿಸಲಾಗಿದೆ. |

| | | |
|---|---|---|
| | | 6. ಕೋವಿಡ್-19 ಸಾಂಕ್ರಾಮಿಕ ರೋಗದ ಪರಿಣಾಮ ದೇಶದಾದ್ಯಂತ ಮಾರ್ಚ್-2020 ರಲ್ಲಿ ಲಾಕ್‌ಡೌನ್ ವಿಧಿಸಿದ್ದರಿಂದ, 6 ತಿಂಗಳುಗಳ ಕಾಲ ಕಾಮಗಾರಿ ಪ್ರಗತಿಯಲ್ಲಿ ವಿಳಂಭವಾಗಿರುತ್ತದೆ.<br>7. ಗುತ್ತಿಗೆದಾರರಿಂದಲೂ ಕಾಮಗಾರಿ ಪ್ರಗತಿಯಲ್ಲಿ ವಿಳಂಭವಾಗಿದ್ದು, ಈಗಾಗಲೇ ರೂ.2,30,932.00 ದಂಡವನ್ನು ವಿಧಿಸಲಾಗಿದೆ. |
| ಉ) | ಬಂದಿದ್ದಲ್ಲಿ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? | ಒಳಚರಂಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ .<br>1. ಆಂತರಿಕ ಒಳಚರಂಡಿ ಮಾರ್ಗ ಮತ್ತು ಇತರೆ ಕಾಮಗಾರಿ ನಿರ್ವಹಿಸುವಾಗ ಉಂಟಾಗುವ ಸಮಸ್ಯೆಗಳನ್ನು ತಕ್ಷಣ ನಿವಾರಿಸುವುದು.<br>2. ಕೆ.ಪಿ.ಟಿ.ಸಿ.ಎಲ್ ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು, ಕಂದಾಯ ಇಲಾಖೆಯಿಂದ ವೆಟ್‌ವೆಲ್ ನಿರ್ಮಿಸಲು ಕೂಡಲೇ ಸ್ಥಳವನ್ನು ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುವುದು.<br>3. ಮಂಡಳಿ ಅಧಿಕಾರಿಗಳಿಂದ ಮೇಲಿಂದ ಮೇಲೆ ಸ್ಥಳ ಪರಿವೀಕ್ಷಣೆ ಮಾಡಿ ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ನಿರ್ದೇಶನ ನೀಡಲಾಗುವುದು.<br>4. ವೆಟ್‌ವೆಲ್ ಘಟಕದ ನಿರ್ಮಾಣಕ್ಕೆ ಅವಶ್ಯವಿರುವ ಜಮೀನನ್ನು ಪಡೆದ ನಂತರ ಬಾಕಿ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ ವಿದ್ಯುತ್ ಯಂತ್ರೋಪಕರಣಗಳನ್ನು ಅಳವಡಿಸಿ ಯೋಜನೆಯನ್ನು 8 ತಿಂಗಳುಗಳಲ್ಲಿ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು |

ಸಂಖ್ಯೆ: ನಅಇ 82 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು